ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 8 ಸೇನಿಸಿ 95

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು ದಿನಾಂಕ: 15-4-1995.

## ಸುತ್ತೋಲೆ

ವಿಷಯ: ಗ್ರೂಪ್-ಡಿ ವರ್ಗದ ನೌಕರರ ಸೇವೆಯನ್ನು ಅಧಿಕಾರಿಗಳು ತಮ್ಮ ಮನೆ ಕೆಲಸಕ್ಕೆ ಉಪಯೋಗಿಸಿಕೊಳ್ಳುವ ಬಗ್ಗೆ-ಸೂಚನೆಗಳು.

ಉಲ್ಲೇಖ:
1) ಸುತ್ತೋಲೆ ಸಂಖ್ಯೆ: ಜಿಎಡಿ 190 ಎಸ್‌ಎಎಸ್ 57 ದಿನಾಂಕ: 18-9-57
2) ಅಧಿಕೃತ ಜ್ಞಾಪನ ಸಂಖ್ಯೆ: ಜಿಎಡಿ 12 ಎಸ್‌ಆರ್‌ಸಿ 74, ದಿನಾಂಕ: 2-1-75
3) ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 13 ಎಸ್‌ಆರ್‌ಸಿ 79 ದಿನಾಂಕ: 31-10-79.
4) ಸುತ್ತೋಲೆ ಸಂಖ್ಯೆ: ಡಿಪಿಎಆರ್ 2 ಎಸ್‌ಆರ್‌ಸಿ 82, ದಿನಾಂಕ: 17-2-82.

-0-

ಉಲ್ಲೇಖಿತ ಸುತ್ತೋಲೆಗಳಲ್ಲಿ ಕೆಲವೊಂದು ಅಧಿಕಾರಿಗಳಿಗೆ ನೀಡಲಾದ 'ಆರ್ಡರ್ಲೀ' ಗಳನ್ನು ಅಡುಗೆ ಕೆಲಸಕ್ಕೆ ಅಥವಾ ಇನ್ನಿತರೆ ಮನೆ ಕೆಲಸಗಳಿಗೆ ಉಪಯೋಗಿಸಿಕೊಳ್ಳಬಾರದು ಎಂಬ ಬಗ್ಗೆ ಸೂಚನೆಗಳನ್ನು ನೀಡಲಾಗಿದೆ. ಈ ರೀತಿ ಅವರ ಸೇವೆಗಳನ್ನು ಉಪಯೋಗಿಸಿಕೊಳ್ಳುವುದು ಕರ್ನಾಟಕ ಸಿವಿಲ್ ಸೇವೆಗಳ (ನಡತೆ) ನಿಯಮ 1966ರ ನಿಯಮ 3(1)(iii) ಮತ್ತು 19ನ್ನು ಉಲ್ಲಂಘಿಸಿದಂತಾಗುತ್ತದೆ.

ಹೀಗೆ ಸೂಚನೆಗಳನ್ನು ನೀಡಿದಾಗ್ಯೂ ಕೂಡ ಕೆಲವು ಅಧಿಕಾರಿಗಳು ತಮಗೆ ನೀಡಲಾದ 'ಆರ್ಡರ್ಲೀ' ಗಳನ್ನು ಅಡುಗೆ ಕೆಲಸಕ್ಕೆ ಅಥವಾ ಇನ್ನಿತರ ಮನೆ ಕೆಲಸಗಳಿಗೆ ಉಪಯೋಗಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದುದರಿಂದ, ಸರ್ಕಾರವು ಎಲ್ಲಾ ಅಧಿಕಾರಿಗಳು ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 13 ಎಸ್‌ಆರ್‌ಸಿ 79, ದಿನಾಂಕ 31-10-79 ರ ಸೂಚನೆಗಳನ್ನು ಯಾವುದೇ ದೂರುಗಳಿಗೆ ಆಸ್ಪದ ನೀಡದೆ ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಆದೇಶಿಸಿದೆ.

(ಕಣ್ಣನ್ ಕುಟ್ಟಿ ಕುಳಾವಿಲ್),
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಿಆಸುಇ(ಸೇವಾ ನಿಯಮಗಳು).

ಪ್ರತಿಯನ್ನು:-

1) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು: ಕಾರ್ಯದರ್ಶಿಗಳು.
2) ಎಲ್ಲಾ ಇಲಾಖಾ ಮುಖ್ಯಸ್ಥರು.
3) ಸರ್ಕಾರದ ಎಲ್ಲಾ ವಿಶೇಷ: ಸಹ: ಅಪರ ಕಾರ್ಯದರ್ಶಿಗಳು.
4) ಸರ್ಕಾರದ ಉಪ: ಅಧೀನ ಕಾರ್ಯದರ್ಶಿಗಳು,
5) ವಾರ ಪತ್ರಿಕೆ